ಓ.ಎಸ್.114/2019 ಪಿ.ಡಬ್ಲು-1
*ಸಲೀಮ್ ಮಲಿಕ್ ತಂದೆ ಮಕ್ತುಮಸಾಬ*

ದಿ.09-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು : ಪ್ರತಿವಾದಿ ನಂ: 1 ಎ ರಿಂದ 1 ಎಫ್ ರವರ ಪರ ವಕೀಲರಾದ ಶ್ರೀ ವಿ.ಎಸ್.ರವರಿಂದ :-***

ನೀವು ಯಾವ ಊರಿನಲ್ಲಿ ವಾಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಗುರುಗುಂಟಾದಲ್ಲಿ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಗುರುಗುಂಟಾದಲ್ಲಿ ವಾಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಹುಟ್ಟಿದಾಗಿನಿಂದ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಗುಂತಗೋಳ, ದೇವರಭೂಪುರ, ಚಿಂಚೋಳಿ ಮತ್ತು ಅರಕೇರಾ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ನುಡಿದಿರುತ್ತಾರೆ. ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಿರಿ ಎಂದರೆ ಸಾಕ್ಷಿಯು ಪದವಿವರೆಗೆ ಆಗಿರುತ್ತದೆ. ಈಗ ನೀವು ಏನು ಕೆಲಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಏಕ್ಸಿಸ್ ಬ್ಯಾಂಕನಲ್ಲಿ ಕೆಲಸ ಮಾಡುತ್ತಿದ್ದೆನೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಏಕ್ಸಿಸ್ ಬ್ಯಾಂಕನಲ್ಲಿ ಕೆಲಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು 5 ವರ್ಷಗಳಿಂದ ಎಂದು ನುಡಿಯುತ್ತಾರೆ. ಗುರುಗುಂಟಾ ಗ್ರಾಮ ಪಂಚಾಯತಿ ಇದೆ ಎಂದರೆ ಸರಿ. ಹಟ್ಟಿ ಗ್ರಾಮದಲ್ಲಿ 1 ನಿವೇಶನಕ್ಕೆ ಅಂದಾಜು ಎಷ್ಟು ಬೆಲೆ ಇದೆ ಎಂದರೆ ಸಾಕ್ಷಿಯು 5 ಲಕ್ಷಕ್ಕಿಂತ ಕಡಿಮೆ ಇದೆ ಎಂದು ನುಡಿಯುತ್ತಾರೆ. 2019 ನೇ ಸಾಲಿನಲ್ಲಿ ದಾವಾ ಆಸ್ತಿಯ ಕಟ್ಟಡದ ಬೆಲೆ ಸುಮಾರು 20-30 ಲಕ್ಷ ಇತ್ತು ಎಂದರೆ ಸಾಕ್ಷಿಯು 5 ಲಕ್ಷದ ಕೆಳಗೆ ಇದೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಿಮ್ಮ ತಂದೆಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವರ್ಗಾವಣೆ ಆದ ಬಗ್ಗೆ ಹಕ್ಕು ದಾಖಲೆ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿಯು ವಿಭಾಗ ಪತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ವಿಭಾಗ ಪತ್ರ ಮಾಡಿದಾಗ ನೀವು ಚಿಕ್ಕವರಾಗಿರುತ್ತಿರಿ ಎಂದರೆ ಸರಿ. ವಿಭಾಗ ಪತ್ರದ ಪ್ರಕಾರ ಎಲ್ಲ ಸಹೋದರರಿಗೆ ಜಮೀನು ಭಾಗಗಳಾಗಿವೆಯಾ ಎಂದರೆ ಸಾಕ್ಷಿಯು ಆಗಿವೆ ಎಂದು ನುಡಿದಿರುತ್ತಾರೆ. ಸದರಿ ಎಲ್ಲಾ ಜಮೀನುಗಳು ನಿಮ್ಮ ತಂದೆ ತನ್ನ ಹೆಸರಿಗೆ ಮಾತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆ ಹಿರಿಯನಾದ ಆತನ ಹೆಸರಿಗೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ತಂದೆ ಮೃತಪಟ್ಟ ನಂತರ ಎಲ್ಲಾ ಜಮೀನುಗಳು ನಮ್ಮ ತಾಯಿಗೆ ವರ್ಗಾಯಿಸುವಂತೆ ಗುರುಗುಂಟಾ ನಾಡಕಚೇರಿಗೆ ಅರ್ಜಿ ಸಲ್ಲಿಸಿರುತ್ತಿರಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದ ನಮ್ಮ ತಾಯಿ ಕೊಟ್ಟಿರಬಹುದು ಎಂದು ನುಡಿದಿರುತ್ತಾರೆ. ದಾವಾ ಪತ್ರದೊಂದಿಗೆ ಹಾಜರುಪಡಿಸಿದ ನಕಾಶೆ

ನೀವೆ ಹೇಳಿ ಬರೆಸಿರುತ್ತಿರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಕಾಂಪ್ಲೇಕ್ಸ ಎಂದು ನಮೂದಿಸಿರುತ್ತಿರಿ ಎಂದರೆ ಸರಿ. ಗ್ರಾಮ ಪಂಚಾಯತಿ ನಕಾಶೆಯಲ್ಲಿ ಮಳಿಗೆ ದಕ್ಷಿಣಕ್ಕೆ ಇದೆ ಎಂದರೆ ಸಾಕ್ಷಿಯು ಖುಲ್ಲಾ ಜಾಗ ಇದೆ ಎಂದು ನುಡಿದಿರುತ್ತಾರೆ. ನೀವು ಇಲ್ಲಿಯವರೆಗು ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಎಷ್ಟುಗಳಿಂದ ಸ್ವಾಧಿನದಲ್ಲಿರುತ್ತಿರಿ ಎಂದರೆ ಸಾಕ್ಷಿಯು ನನ್ನ ತಂದೆಯ ಕಾಲದಿಂದಲೂ ಹಾಗೂ 2016 ರಿಂದ ನಾನು ಸ್ವಾದಿನದಲ್ಲಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಬಳೆ ವ್ಯಾಪಾರ ಮಾಡುತ್ತಾ ಸ್ವಾಧಿನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇದ್ದ ಕಾರಣ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೀವು ವಾಸ ಮಾಡಿರುವುದಿಲ್ಲ ಮತ್ತು ದಾವಾ ಆಸ್ತಿಯ ಚೆಕ್ಕಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿನವರೆಗು ಪ್ರತಿವಾದಿಯರು ಸ್ವಾಧಿನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.